ಮನೆಯವರ ಹಿಂಸೆಗೆ ಕಟ್ಟಿಕೊಂಡೆ' ಎಂದು ಮೊದಲ ದಿನವೇ ಕಹಿ ಉಗುಳಿದ್ದಳು. ಇಂದಲ್ಲ ನಾಳೆ ಸರಿಹೋಗಬಹುದು ಎನ್ನುವ ಆಸೆಯಲ್ಲಿ ಐದು ದಿನದ ಹನಿಮೂನ್ ಕಳೆದಿತ್ತು – ಮಧುವಿಲ್ಲದ ಅಮಾವಾಸ್ಯೆ ಚಂದ್ರ!

ಆರು ತಿಂಗಳಾದರೂ 'ಏನು ವಿಶೇಷವಿಲ್ವಾ' ಎಂದು ಅವಳ ಕಡೆಯವರು ಅನುಮಾನಿಸಿದಾಗ, ಅವಮಾನವೆನ್ನಿಸಿ ನನ್ನಲ್ಲಿದ್ದ ದೈತ್ಯನ ಮೇಲುಗೈಯಾಗಿತ್ತು.

ವಿಪಿನ್ ಹುಟ್ಟಿದ್ದ. ಅಮೆರಿಕಕ್ಕೆ ಹೋದಮೇಲೆ ಪಾಶ್ಚಾತ್ಯ ಉಡುಗೆಗೆ ವಾಲಿದ್ದ ಶರ್ಮಿಯನ್ನು ಕಂಡು ಸೋಜಿಗವೆನಿಸಿತ್ತು. ಅಗತ್ಯಕ್ಕಿಂತ ಹೆಚ್ಚು ಅಂದ ಪ್ರದರ್ಶಿಸುವ ದಿರಿಸಿನಲ್ಲಿ ಅವಳು ಅಪ್ಸರೆಯಂತೆ ಕಂಡಿದ್ದಳು. ನನ್ನ ಪುಣ್ಯ ಹೆಚ್ಚು ಪ್ರತಿಭಟಿಸಲಿಲ್ಲ. ಆ ದಿನಗಳಲ್ಲೇ ವಿಫುಲಳ ಅಂಕುರವಾಗಿತ್ತು. ಕೌಟುಂಬಿಕವಾಗಿ ನಮ್ಮದು ಅನ್ಯೋನ್ಯ ದಾಂಪತ್ಯವೆಂದು ನಿರೂಪಿಸಿಯಾಗಿತ್ತು. ಕಟ್ಟಿಕೊಂಡ ತಪ್ಪಿಗೆ ತಾಯಿಯಾಗಿದ್ದೆ ಅಂತ ಗೊಣಗುತ್ತಲೇ ಇದ್ದಳು. ಸಂಭೋಗ ಎನ್ನುವುದು ಸೃಷ್ಟಿಕ್ರಿಯೆಗೆ ಮಾತ್ರ, ರಂಜನೆಗೆ ಅಲ್ಲ ಅನ್ನೋದು ಅವಳ  ತಲೇಲಿ ಬೇರೂರಿತ್ತು. ಅವಳು ಉದ್ಯೋಗಕ್ಕೆ ಹೋಗಲು ಶುರುಮಾಡಿದ ಮೇಲೆ ನಮ್ಮಿಬ್ಬರ ನಡುವೆ ಮಾತುಕತೆಗೆ ವಿಷಯವೇ ಇಲ್ಲ ಅನ್ನುವಷ್ಟು ಯಾಂತ್ರಿಕತೆ. ವಿಪಿನ್ ಸ್ವಲ್ಪ ನನ್ನನ್ನು ಹಚ್ಕೊಂಡಿದ್ದು ಬಿಟ್ಟರೆ ವಿಫುಲ ಅಮ್ಮನ ಅಚ್ಚು, ಸ್ವಭಾವದಲ್ಲೂ. ಹದಿನೈದು ವರ್ಷಗಳು ಅಲ್ಲಿ ಕಳೆದಿದ್ದು ಸಾಕು ಅನ್ನಿಸುವ ಹೊತ್ತಿಗೆ ಗುಜರಾತಿನ ರಿಸರ್ಚ್ ಇನ್‌ಸ್ಟಿಟ್ಯೂಟ್‌ನಲ್ಲಿ ಸೀನಿಯರ್ ಸೈಂಟಿಸ್ಟ್ ಹುದ್ದೆ ಸಿಕ್ಕಿತ್ತು. ನನ್ನ ನಿರ್ಧಾರ ಹೇಳಿದ್ದೆ. 'ನಾನು ಬರೋಲ್ಲ, ಇಲ್ಲೇ ಇರ್ತೀನಿ' ಅಂತ ಖಂಡಿತವಾಗಿ ಹೇಳಿದಳು. ವಯಸ್ಸಿಗೆ ಬಂದಿದ್ದ ವಿಪಿನ್ ಮಾತ್ರ, 'ಬೆಸ್ಟ್ ವಿಷಸ್, ಮಿಸ್ ಯೂ ಡ್ಯಾಡ್' ಅಂತ ಬೀಳ್ಕೊಟ್ಟಿದ್ದ.

'ದುಬೆ, ನನ್ನ ಕಸಿನ್ ಸುಧೀದೂ ಒಂಥರಾ ಟ್ರಾಜಿಡಿ' ಫಣಿ ಮೌನ ಮುರಿದ.

'ಸುಧಿ ಅಂದ್ರೆ ಸೃಜನಾಳ ಹಸ್ಬೆಂಡ್?' ಕಿವಿ ಚುರುಕಾಯಿತು, 'ಆದರೂ ಅವಳನ್ನು ನೋಡಿದ್ರೆ ಹಾಗೆ ಅನ್ನಿಸೊಲ್ಲ'.

'ನಿನ್ನ ನೋವು ಮುಖದಲ್ಲಿ ಗೊತ್ತಾಗುತ್ತೋ?' ಖಾರವಾಗಿತ್ತು ಅವನ ದನಿ.

ನಾನು ಸುಮ್ಮನಾದೆ.

